ಅ) ಇಲ್ಲಿ ಮಾದರಿ ತೋಟದ ಕೆಲಸವನ್ನು ಸರ್ಕಾರ ಯಾವಾಗ ಪ್ರಾರಂಭಿಸುವುದು?

ಇ) ಈ ಜಾಗದಲ್ಲಿ ಅನಧಿಕೃತ ನಿವಾಸಗಳು ಆಗದಂತೆ ಸರ್ಕಾರ ಎಚ್ಚರವಹಿಸಿದೆಯೇ?

ಈ) ತೋಟಗಾರಿಕೆ ಪ್ರಯೋಜನೆ ಕೂಡಲೇ ದೊರೆಯುವಂತೆ ಇಲ್ಲಿ ತನ್ನ ಕಛೇರಿಯನ್ನು ಯಾವಾಗ ತೆರೆಯುವುದು?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು):

ಅ) ಮೂಡಬಿದ್ರಿಯಲ್ಲಿ ಮಾದರಿ ತೋಟಗಾರಿಕೆ ಕ್ಷೇತ್ರ ಪ್ರಾರಂಭಿಸುವ ಪ್ರಸ್ತಾವನೆ ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ತೋಟಗಾರಿಕೆ ಕಛೇರಿಯನ್ನು ತೆರೆಯುವ ಪ್ರಸ್ತಾವನೆ ಇರುವುದಿಲ್ಲ.

ದರಖಾಸ್ತು ಮಂಜೂರಾತಿ ಬಗ್ಗೆ.

1264 - ಶ್ರೀಮತಿ ಮೋಟಮ್ಮ(ಮೂಡಿಗೆರೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆವ್ತಿ ಹೋಬಳಿ, ದೇವರಹಳ್ಳಿ ಸರ್ವೆ ನಂ. 55ರಲ್ಲಿ 14 ಗಿರಿಜನರ, 6 ಜನ ಇತರೆ ವರ್ಗದ ಜನರಿಗೆ ದರಖಾಸ್ತು ಮಂಜೂರಾತಿ ಯಾವಾಗ ಮಾಡಲಾಯಿತು; ಮಂಜೂರಾದ ಜಮೀನಿನ ವಿಸ್ತೀರ್ಣವೆಷ್ಟು?

ಆ) ಈ ಜಮೀನನ್ನು ಪಟ್ಟಭದ್ರ ಹಿತಾಸಕ್ತಿಗಳು ಅಕ್ರಮವಾಗಿ ಒತ್ತುವರಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಇಂಥವರ ಮೇಲೆ ಕ್ರಮ ಕೈಗೊಳ್ಳಲಾಗುವುದೇ?

ಈ) ಹಾಗಿದ್ದಲ್ಲಿ ಅಂತಹವರ ಮೇಲೆ ಏನು ಕ್ರಮ ಕೈಗೊಳ್ಳಲಾಗುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ) ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು ಜಿಲ್ಲೆ ಇವರ ಆದೇಶ ಸಂಖ್ಯೆ: ಎಲ್‌ಎನ್‌ಡಿ : ಸಿಆರ್ : 404 : 84-85, ದಿನಾಂಕ 18.10.84ರ ಪ್ರಕಾರ ಆವ್ತಿ ಹೋಬಳಿ ದೇವರಹಳ್ಳಿ ಗ್ರಾಮದ ಸರ್ವೆ ನಂ.55ರಲ್ಲಿನ ಜಮೀನನ್ನು ಈ ಕೆಳಕಂಡವರಿಗೆ ಮಂಜೂರು ಮಾಡಲಾಗಿರುತ್ತದೆ.

12 ಜನ	ಪರಿಶಿಷ್ಟಜಾತಿ:	
	ಪರಿಶಿಷ್ಟಪಂಗಡದವರು	36-00 ಎಕರೆಗಳು
9 ಜನ	ಇತರರು	43-00 ಎಕರೆಗಳು
	ಒಟ್ಟು	79-00 ಎಕರೆಗಳು

ಆ) ಹೌದು.

ಇ) ಹೌದು.

ಈ) ಅಂತಹವರನ್ನು ಕರ್ನಾಟಕ ಭೂ ಕಂದಾಯ ಕಾಯಿದೆ 1964ರ ಕಲಂ 94ರಂತೆ ಒಕ್ಕಲೆಬ್ಬಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು.